**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 1039/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.06**

**ದಿನಾಂಕಃ 05.03.2026** **ಸಿಡಬ್ಲ್ಯೂ.09**

| | |
|---|---|
| ಹೆಸರು | ಎಂ ಫೈರೋಜ ಖಾನ್ |
| ತಂದೆ ಹೆಸರು | ಮೊಹಮ್ಮದ್ ಸಾಬ್ |
| ವಯಸ್ಸು | 50 ವರ್ಷ |
| ಉದ್ಯೋಗ | ಸಿ ಹೆಚ್ ಸಿ |
| ವಾಸ ಸ್ಥಳ | ಮಲೆಬೆನ್ನೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸನ್ 2021 ರಿಂದ ಇಲ್ಲಿಯವರೆಗೆ ಹೆಚ್ ಸಿ ಆಗಿ ಮಲೆಬೆನ್ನೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 20.11.2022 ರಂದು ರಾತ್ರಿ 8.30 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ ಚಾಸಾ.1 ರವರು ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ.221/2022 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ ವ ವರದಿ ನಿವೇದಿಸಿಕೊಂಡಿದ್ದೇನೆ. ಸಾಕ್ಷಿಯು ಗುರುತಿಸಿದ ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಪ್ರ ವ ವರದಿಯನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ. 6 (ಎ) ಎಂದು ಗುರುತಿಸಲಾಯಿತು.

ದಿಃ 30.11.2022 ರಂದು ಮಧ್ಯಾಹ್ನ 2.45 ಗಂಟೆಗೆ ಕೃತ್ಯ ನಡೆದ ಸ್ಥಳ ಕೋಮಾರನಹಳ್ಳಿ ಗ್ರಾಮದ ಉಜ್ಜಿನಯ್ಯ ರವರ ಮಕ್ಕಳ ಹೆಸರಿನಲ್ಲಿರುವ ರಿ ಸರ್ವೆ ನಂ. 93/4 ಜಮೀನಿನಲ್ಲಿರುವ ಪಿರ್ಯಾದಿಯ ವಾಸದ ಮನೆಯ ಮುಂದೆ ಸ್ಥಳಕ್ಕೆ ಹೋಗಿ ಚಾಸಾ.8 ರವರ ಮೂಲಕ ಅಲ್ಲಿಯೇ ಇದ್ದ ಗ್ರಾಮದ ವಾಸಿಗಳಾದ ಚಾಸಾ.2 ಮತ್ತು 3 ರವರಿಗೆ ನೋಟಿಸ ನೀಡಿ ಸ್ಥಳಕ್ಕೆ ಬರಮಾಡಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ.7 ಎಂದು ಸಾಕ್ಷಿಯ ಸಹಿಯನ್ನು ನಿಪಿ. 7 (ಎ) ಎಂದು ಗುರುತಿಸಲಾಯಿತು. ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 2.40 ರಿಂದ 3.45 ರವರೆಗೆ ಸ್ಥಳ ಪಂಚನಾಮೆ ಜರುಗಿಸಿ ಕಚ್ಚಾ ನಕಾಶೆ ತೆಗೆದಿರುತ್ತೇವೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಕಚ್ಚಾ

ನಕಾಶೆಯನ್ನು ಈಗಾಗಲೇ ನಿಪಿ.3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.3 (ಬಿ) ಎಂದು ಗುರುತಿಸಲಾಯಿತು. ಸದರಿ ಸಂದರ್ಭದಲ್ಲಿ ಚಾಸಾ.7 ರವರು ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ಈಗಾಗಲೇ ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ.7 ರವರಿಂದ 65 ಬಿ ಪ್ರಮಾಣ ಪತ್ರ ಪಡೆದಿರುತ್ತೇನೆ. ಸಾಕ್ಷಿಯು ಗುರುತಿಸಿದ ಪ್ರಮಾಣ ಪತ್ರವನ್ನು ನಿಪಿ.8 ಎಂದು ಸಾಕ್ಷಿಯ ಸಹಿಯನ್ನು ನಿಪಿ.8 (ಎ) ಎಂದು ಗುರುತಿಸಲಾಯಿತು. ನಂತರ ಚಾಸಾ. 2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅದೇ ದಿನ ಚಾಸಾ.2 ರಿಂದ 6 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಗಾಯದ ಪ್ರಮಾಣ ಪತ್ರ ಇಲ್ಲದ ಬಗ್ಗೆ ಚಾಸಾ.1 ರವರ ಮರುಹೇಳಿಕೆ ಪಡೆದಿರುತ್ತೇನೆ. ನಂತರ ಆರೋಪಿತರ ವಿಚಾರಣೆ ಮಾಡಿ ಅವರ ಗುರುತಿನ ಚೀಟಿಗಳನ್ನು ಪಡೆದಿರುತ್ತೇನೆ.

ದಿಃ 08.07.2023 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 1 ರಿಂದ 3 ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಗುರುತಿಸುವಿಕೆ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ಅವರ ಪರ ವಕೀಲರು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ಆರ್ ಜಿ ವಕೀಲರಿಂದಃ**

ನಾನು ಕೂಲಂಕುಷವಾಗಿ ತನಿಖೆ ಮಾಡದೇ ಆರೋಪಿತರ ವಿರುದ್ಧ ನೀಡಿದ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಬೇಟಿ ನೀಡಿಲ್ಲ, ಪಂಚನಾಮೆ ಜರುಗಿಸಿಲ್ಲ, ಛಾಯ ಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ.7 ರವರಿಂದ ಯಾವುದೇ 65 ಬಿ ಪ್ರಮಾಣ ಪತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.2 ರಿಂದ 6 ರವರ ಹೇಳಿಕೆ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಆರೋಪಿತರು ಚಾಸಾ.1 ಮತ್ತು ಇತರರ ವಿರುದ್ಧ ಕ್ರೈಂ ನಂ 222/2022 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಪಿರ್ಯಾದಿದಾರರು ತಪ್ಪು ಮಾಡಿ ಆರೊಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ